3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ, ತುಮಕೂರು

**Spl.C. No. 101/2024**

ಪ್ರಾ.ಸಾ.1

ಚಾ.ಸಾ.1

| | |
|---|---|
| ಹೆಸರು | ಹನುಮಂತರಾಯ |
| ತಂದೆಯ ಹೆಸರು | ನರಸಿಂಹಪ್ಪ |
| ವಯಸ್ಸು | 35 ವರ್ಷ |
| ಉದ್ಯೋಗ | ಸ್ಟಾಪ್ ನರ್ಸ್ |
| ವಾಸಸ್ಥಳ | ಕನ್ನಮೇಡಿ |

ಸಾಕ್ಷಿಯನ್ನು ದಿನಾಂಕ 05.11.2025 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ನನಗೆ ಮೃತೆ ಐಶ್ವರ್ಯ ರವರು ತಂಗಿಯಾಗಬೇಕು. ಅವರು ನನ್ನ ಚಿಕ್ಕಪ್ಪನ ಮಗಳು. ಅವರು ಬೆಂಗಳೂರಿನ ಬೌರಿಂಗ್ ಆಸ್ಪತ್ರೆಯಲ್ಲಿ ಪ್ಯಾರಾ ಮೆಡಿಕಲ್ ಅನ್ನು ಮುಗಿಸಿ, ಬಗಲಗುಂಟೆಯಲ್ಲಿ ವಾಸ ಮಾಡುತ್ತಿದ್ದರು. ಅವರು ಬೆಂಗಳೂರಿನ ಬಗಲಗುಂಟೆ 8 ನೇ ಮೈಲಿಯ ಪೆಟ್ರೋಲ್ ಬಂಕ್ ನಲ್ಲಿ ಪಾರ್ಟ್ ಟೈಮ್ ಕೆಲಸ ಮಾಡುತ್ತಿದ್ದರು. 1 ನೇ ಆರೋಪಿಯು ಸಹ ಸದರಿ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡುತ್ತಿದ್ದರು. ಆದ್ದರಿಂದ, ಅವರು ಸ್ನೇಹಿತರ ಮುಖಾಂತರ ಪರಿಚಯವಾಗಿ ಮೃತೆ ಐಶ್ವರ್ಯ ರವರು 1 ನೇ ಆರೋಪಿಯ ಮನೆಯಲ್ಲಿಯೇ ಇದ್ದರು.

2) 1 ನೇ ಆರೋಪಿಯ ಮನೆಯಲ್ಲಿ ಅವರು ತಾಯಿ 2 ನೇ ಆರೋಪಿ ವಾಸ ಮಾಡುತ್ತಿದ್ದರು. ಮೃತೆ ಐಶ್ವರ್ಯ ರವರು ನನಗೆ ಕರೆ ಮಾಡುತ್ತಿದ್ದರು. ಆಗ 1 ನೇ ಆರೋಪಿಯು ತನ್ನನ್ನು ಅವರ ಮನೆಯಲ್ಲಿ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದು ಹೇಳುತ್ತಿದ್ದರು. ಈಗ ಸುಮಾರು

2 ವರ್ಷಗಳ ಹಿಂದೆ ಐಶ್ವರ್ಯ ರವರು ನನಗೆ ಕರೆ ಮಾಡಿ ನನಗೆ ಬಗಲಗುಂಟೆ ಪೋಲೀಸ್ ಠಾಣೆಯ ಹತ್ತಿರ ಬರುವಂತೆ ತಿಳಿಸಿರುತ್ತಾರೆ. ಅದರಂತೆ ನಾನು ಬಗಲಗುಂಟೆ ಪೋಲೀಸ್ ಠಾಣೆಯ ಹತ್ತಿರ ಹೋದಾಗ ಅವರು ಇರಲಿಲ್ಲ. ಠಾಣೆಯಲ್ಲಿದ್ದ ಪೊಲೀಸರು ಐಶ್ವರ್ಯ ರವರನ್ನು ಸಪ್ತಗಿರಿ ಆಸ್ಪತ್ರೆಗೆ ದಾಖಲು ಮಾಡಿರುವುದಾಗಿ ಹೇಳಿದರು. ನಂತರ ನಾನು ಸದರಿ ಆಸ್ಪತ್ರೆಗೆ ಹೋದಾಗ ಐಶ್ವರ್ಯ ರವರು ಚಿಕಿತ್ಸೆಯನ್ನು ಪಡೆದುಕೊಳ್ಳುತ್ತಿದ್ದರು. ನಾನು ಅವರನ್ನು ವಿಚಾರಿಸಿದಾಗ 1 ನೇ ಆರೋಪಿಯ ಮುಖಾಂತರ ಅವರು ಗರ್ಭಿಣಿಯಾಗಿದ್ದು, ಗರ್ಭಪಾತ ಮಾಡುವಂತೆ ಮಾನಸಿಕವಾಗಿ ಹಿಂಸೆ ಕೊಡುತ್ತಿದ್ದರು ಎಂದು ತಿಳಿಸಿದರು. ನಂತರ ನಾನು ಐಶ್ವರ್ಯ ರವರನ್ನು ಕರೆದುಕೊಂಡು ನಮ್ಮ ಮನೆಗೆ ಹೋದೆವು.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ತುಮಕೂರು.

ಸಾಕ್ಷಿಯ ಸಹಿ